**ಡಿ. ಡಬ್ಲ್ಯೂ - 01**

**ದಿನಾಂಕ: 08-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ-ವಾದಿಯ ಪರ ಶ್ರೀ.ವಿ.ಎಲ್.ಎನ್ ,ವಕೀಲರಿಂದ:-**

06. ದಾವಾಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡುವ ಮೊದಲು ದಾವಾಸ್ವತ್ತಿಗೆ ಸಂಬಂಧಿಸಿದ ದಾಖಲೆಗಳು ನನ್ನ ಹೆಸರಿನಲ್ಲಿ ಬರುತ್ತಿದ್ದವು. ನನ್ನ ತಂದೆಯವರು ಭಾಗದ ಮುಖಾಂತರ ನನಗೆ ದಾವಾಸ್ವತ್ತನ್ನು ನೀಡಿದ್ದರು. 2000 ನೇ ಇಸವಿಯಲ್ಲಿ ನಾನು ನಿಪಿ-3 ರಂತೆ ದಾವಾಸ್ವತ್ತನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ. ಈಗ ಸಾಕ್ಷಿಗೆ ನಿಪಿ-3 ನ್ನು ತೋರಿಸಿದ್ದು, ಅದರಲ್ಲಿ ನಿಮಗೆ ದಾವ್ಸಾತ್ತಿಗೆ ಸಂಬಂಧಿಸಿದಂತೆ ಪೌತಿ ಆಧಾರದ ಮೇಲೆ ಖಾತೆ ಆಗಿರುತ್ತದೆ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ವಿಷಯವು ತಪ್ಪಾಗಿದೆ ಎಂದು ನುಡಿದಿರುತ್ತಾರೆ. ಸದರಿ ತಪ್ಪಾಗಿರುವ ವಿಷಯವನ್ನು ಸರಿಪಡಿಸಲು ನಾನು ಯಾವುದೇ ಪ್ರಯತ್ನವನ್ನು ಪಟ್ಟಿರುವುದಿಲ್ಲ.

07. ನಿಪಿ-3 ನ್ನು ಮಾಡುವ ಸಮಯದಲ್ಲಿ ನಿಮ್ಮ ತಂದೆಯವರು ಬದುಕಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-3 ನ್ನು ಮಾಡಲು ನಿಮ್ಮ ಒಟ್ಟು ಕುಟುಂಬದ ಸದಸ್ಯರ ಒಪ್ಪಿಗೆಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-3 ರಲ್ಲಿ ನೀವು ಹೆಣ್ಣು ಮಕ್ಕಳ ಮದುವೆಗಾಗಿ ಹಾಗೂ ಭೂ ಅಭಿವೃದ್ದಿ ಎಂದು ನಮೂದಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನಿಪಿ-7 ರಲ್ಲಿ ದಾವಾಸ್ವತ್ತನ್ನು ಹೆಣ್ಣು ಮಕ್ಕಳ ಮದುವೆಗಾಗಿ ಮತ್ತು ಭೂ ಅಭಿವೃದ್ದಿಗಾಗಿ ಮೀಸಲಿಡಲಾಗಿರುತ್ತದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸಾಕ್ಷಿಯು ಮುಂದುವರೆದು ನಿಪಿ-7 ನ್ನು ಮಾಡುವ

ಮೊದಲು ತಾನು ತನ್ನ ಸಹೋದರಿಯರ ಮದುವೆಯನ್ನು ಮಾಡಿದ್ದು ಮತ್ತು ಅದಕ್ಕೆ ಸಂಬಂಧಿಸಿದಂತೆ ಸಾಲವನ್ನು ಮಾಡಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಈಗ ಸಾಕ್ಷಿಗೆ ನಿಪಿ-3 ನ್ನು ತೋರಿಸಿದ್ದು, ಅದರಲ್ಲಿ ನಿಮ್ಮ ಸಹೋದರಿಯ ಮದುವೆಯನ್ನು ಮಾಡಿದ್ದು ಅದಕ್ಕೆ ಸಂಬಂಧಿಸಿದಂತೆ ಸಾಲವನ್ನು ತೀರಿಸಬೇಕು ಎಂದು ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವ್ಯವಸಾಯದಿಂದ ಬರುವ ಆದಾಯವನ್ನು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದಂತೆ ನೀವು ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ನನ್ನ ಸಹೋದರಿಯ ಮದುವೆಯನ್ನು ಮಾಡಲು ನನಗೆ ಆಗಿರುವ ಖರ್ಚಿಗೆ ಸಂಬಂಧಿಸಿದಂತೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ನೀವು ಭೂ ಅಭಿವೃದ್ದಿಯನ್ನು ಮಾಡಲು ಖರ್ಚು ಮಾಡಿರುವ ವಿಷಯಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

08. ನಿಪಿ-7 ನ್ನು ಮಾಡಿದ ಎಷ್ಟು ದಿನಗಳಲ್ಲಿ ನಿಮ್ಮ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿಯು 2000 ಇಸವಿಯಲ್ಲಿ ಖಾತೆ ಆಗಿತ್ತು ಎನ್ನುತ್ತಾರೆ. ನಿಪಿ-7 ನ್ನು ಮಾಡಿದ ಒಂದು ವರ್ಷಕ್ಕೆ ನಿಮ್ಮ ಹೆಸರಿಗೆ ಖಾತೆ ಆಗಿತ್ತಾ ಎಂದರೆ ಸಾಕ್ಷಿಯು ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. 1989 ನೇ ಇಸವಿಯಲ್ಲಿ ನಿಮ್ಮ ತಂಗಿಯಾದ ದೇವರಾಜಮ್ಮನವರ ಮದುವೆ ಆಗಿರುತ್ತದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. 1997-98 ನೇ ಇಸವಿಯಲ್ಲಿ ನನ್ನ ತಂಗಿಯಾದ ಮಂಜುಳರವರ ಮದುವೆ ಆಗಿರುತ್ತದೆ. 1998 ನೇ ಇಸವಿಯಲ್ಲಿ ನನ್ನ ತಾಯಿಯವರು ಮೃತ ಪಟ್ಟಿರುತ್ತಾರೆ. ನಿಮ್ಮ ತಾಯಿಯ ಆರೋಗ್ಯದ ಖರ್ಚು ಮತ್ತು ಅವರ ಅಂತ್ಯಕ್ರಿಯೆಯ ಖರ್ಚನ್ನು ವಾದಿಯವರೇ ಮಾಡಿರುತ್ತಾರೆ

ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಮೂಲದಿಂದ ವ್ಯವಸಾಯವನ್ನು ಮಾಡುತ್ತಿದ್ದ ಕಾರಣದಿಂದ ನೀವು ಆರ್ಥಿಕವಾಗಿ ಅಷ್ಟಾಗಿ ಚನ್ನಾಗಿ ಇರಲಿಲ್ಲ ಮತ್ತು ವಾದಿಯು ಸರ್ಕಾರಿ ನೌಕರಿಯಲ್ಲಿ ಇದ್ದ ಕಾರಣ ಅವರು ಆರ್ಥಿಕವಾಗಿ ಚನ್ನಾಗಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**